# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 740 |
| 2 | ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 13–07–2023 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಹಲವಾರು ಬಡಾವಣೆಗಳು ಪ್ರವಾಹ ಭೀತಿಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಮಳೆಗಾಲ ಆರಂಭಕ್ಕೂ ಮುನ್ನ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಬಿ.ಬಿ.ಎಂ.ಪಿ ಕೈಗೊಂಡಿರುವ ಕ್ರಮಗಳೇನು; | ಮಳೆಗಾಲ ಆರಂಭಕ್ಕೂ ಮುನ್ನ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಮುನ್ನೆಚ್ಚರಿಕೆ ಕ್ರಮಗಳನ್ನು 4 ವಿಧಗಳಲ್ಲಿ ಬಿಬಿಎಂಪಿಯು ಕೈಗೊಂಡಿದ್ದು, ಸದರಿ ಕ್ರಮಗಳು ಕೆಳಕಂಡಂತೆ ಇರುತ್ತವೆ.<br><br>1. **ವೈಜ್ಞಾನಿಕ ಕ್ರಮಗಳು:**<br>• 126 ಸ್ಥಳಗಳಲ್ಲಿ ಈಗಾಗಲೇ Water Level Sensors ಗಳನ್ನು ಅಳವಡಿಸಲಾಗಿದೆ.<br>• "ಮೇಘ ಸಂದೇಶ" ಮೊಬೈಲ್ ಆಪ್ ಅನ್ನು ಅಳವಡಿಸಿ, ಮಳೆಯ ಪ್ರಮಾಣವನ್ನು ಮುಂಚಿತವಾಗಿ ಗ್ರಹಿಸಿ ಸಾರ್ವಜನಿಕರಿಗೆ ಮುಂಜಾಗ್ರತ ಕ್ರಮಗಳನ್ನು ಮತ್ತು ವಾಹನ ಸಂಚಾರ ವ್ಯವಸ್ಥೆಯ ಬದಲಾವಣೆಗೆ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>• ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರದಲ್ಲಿ ಪಾಲಿಕೆ ಅಧಿಕಾರಿಗಳಿಗೆ ಪ್ರಕೃತಿ ವಿಕೋಪ ನಿರ್ವಹಣಾ ತರಬೇತಿಗಳನ್ನು ಕೌಶಲ್ಯ ಅಭಿವೃದ್ಧಿ ಪಡಿಸಲು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದ್ದು, ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ತರಬೇತಿ ನೀಡಲಾಗಿದೆ. |

| | | |
|---|---|---|
| | | • ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾಯ್ದೆ ಅಡಿ SDRF / NDRF ತಂಡಗಳನ್ನು ಪಕೃತಿಯ ವಿಕೋಪ / ವಿಪತ್ತು ಪರಿಸ್ಥಿತಿಯಲ್ಲಿ ನಿಯೋಜಿಸಲಾಗುವುದು ಹಾಗೂ ಸಾರ್ವಜನಿಕರ ಆಸ್ತಿ ಪಾಸ್ತಿಗಳನ್ನು ಕಾಪಾಡುವುದು.<br>• ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ರವರ ಅಧ್ಯಕ್ಷತೆಯಲ್ಲಿ ಬೆಂಗಳೂರು ನಗರ ಸಂಚಾರಿ ಪೊಲೀಸ್, ಅಗ್ನಿ ಶಾಮಕ ದಳ, ಬೆಸ್ಕಾಂ, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಹಾಗೂ ಬಿ.ಬಿ.ಎಂ.ಪಿ ಸಮನ್ವಯತೆಯೊಂದಿಗೆ, ಮಳೆಯಿಂದಾಗುವ ತುರ್ತು ಪರಿಸ್ಥಿತಿಯನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಿ ಕ್ರಮ ಕೈಗೊಳ್ಳಲು ತಂಡಗಳನ್ನು ರಚಿಸಲಾಗಿರುತ್ತದೆ.<br>• 183 Chocking Points (Bridges and Culverts) ಗಳನ್ನು ಗುರುತಿಸಲಾಗಿರುತ್ತದೆ. ಮಳೆಯಾದ ಸಂದರ್ಭಗಳಲ್ಲಿ ಪ್ರತಿನಿತ್ಯ ಮಳೆ ನೀರು ಸರಾಗವಾಗಿ ಹರಿಯಲು ಕ್ರಮವಹಿಸಲಾಗಿರುತ್ತದೆ.<br>• 46 ಅತೀ ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಅನ್‌ಲೈನ್‌ನಲ್ಲಿ ಪ್ರವಾಹ ಪರಿಸ್ಥಿತಿ ಮತ್ತು ಮಳೆ ನೀರು ಹರಿವಿನ ಮಟ್ಟವನ್ನು ನಿಖರವಾಗಿ ಗ್ರಹಿಸಿ ತುರ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br>• ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರದಿಂದ ಸತತವಾಗಿ ದಿನಂಪ್ರತಿ ಮಾಹಿತಿಯನ್ನು ಪಡೆಯಲಾಗುತ್ತಿರುತ್ತದೆ.<br>• ಬೆಂಗಳೂರು ನಗರದಲ್ಲಿ 56 ಅತೀ ಸೂಕ್ಷ್ಮ ಮತ್ತು 143 ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಲಾಗಿರುತ್ತದೆ. ಇದರಲ್ಲಿ 28 ಅತೀ ಸೂಕ್ಷ ಪ್ರದೇಶಗಳನ್ನು ಮತ್ತು 94 ಸೂಕ್ಷ್ಮ ಪ್ರವಾಹ ಪ್ರದೇಶಗಳನ್ನು ಪ್ರವಾಹ ರಹಿತವನ್ನಾಗಿ ಅಭಿವೃದ್ಧಿಗೊಳಿಸಲಾಗಿರುತ್ತದೆ. |

| | | |
|---|---|---|
| | | **2. ತುರ್ತು ಕ್ರಮಗಳು:**<br>• ಬೃಹತ್ ನೀರುಗಾಲುವೆ ವಿಭಾಗದಿಂದ 28 ವಿಧಾನಸಭಾ ಕ್ಷೇತ್ರವಾರು ವಾರ್ಷಿಕ ನಿರ್ವಹಣೆ 03 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನೀಡಲಾಗಿದ್ದು, ದೈನಂದಿನ ನಿರ್ವಹಣಾ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br>• ಪಾಲಿಕೆಯ ಕೇಂದ್ರ ಕಛೇರಿ ಮತ್ತು 08 ವಲಯಗಳಲ್ಲಿ ಶಾಶ್ವತ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿರುತ್ತದೆ.<br>• ದೂರುಗಳನ್ನು ದೂರವಾಣಿಗಳು / ಸಹಾಯ 2.0 ಮೊಬೈಲ್ ಅಪ್ಲಿಕೇಶನ್ ಮೂಲಕ ಸ್ವೀಕರಿಸಲಾಗುತ್ತದೆ ಮತ್ತು ಸದರಿ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತತ್‌ಕ್ಷಣದಲ್ಲಿಯೇ ವರ್ಗಾಯಿಸಲಾಗುವುದು.<br>• ಎರಡು 47 ಹೆಚ್.ಪಿ ಸಾಮರ್ಥ್ಯದ ನೀರಿನ ಪಂಪ್‌ಗಳನ್ನು ಖರೀದಿಸಲಾಗಿದ್ದು, ಸದರಿ ಪಂಪ್‌ಗಳನ್ನು ಉಪಯೋಗಿಸಲು ಸಿದ್ಧವಾದ ಸ್ಥಿತಿಯಲ್ಲಿ ಇಡಲಾಗಿದೆ.<br>**3. ಅಲ್ಪಾವಧಿ ಕ್ರಮಗಳು:**<br>• ಬೆಂಗಳೂರು ನಗರದ ತಡೆಗೋಡೆ ಇರುವಂತಹ ಒಟ್ಟು 440.00 ಕಿ.ಮೀ ಉದ್ದ ರಾಜಕಾಲುವೆಗಳನ್ನು ಸಮಪರ್ಕವಾಗಿ, ನಿಯಮಿತವಾಗಿ ಮತ್ತು ನಿರಂತರವಾಗಿ ನಿರ್ವಹಿಸಲು "ವಾರ್ಷಿಕ ನಿರ್ವಾಹಣಾ ಗುತ್ತಿಗೆ"ಯನ್ನು **(Annual Maintenance with Repetitive Cleaning of SWD in Bangalore City)** ಅನ್ನು ಜಾರಿಗೆ ತರಲಾಗಿದ್ದು, ಪ್ರತಿ ನಿತ್ಯ ಸದರಿ ರಾಜಕಾಲುವೆಗಳನ್ನು ಹೂಳು ಮುಕ್ತಗೊಳಿಸಿ ಮತ್ತು ತೇಲುವ ಕಸ ಮತ್ತು ಸೇತುವೆಗಳನ್ನು ದುರಸ್ಥಿಗೊಳಿಸುವ ಯೋಜನೆಯನ್ನು ಜಾರಿಗೆ ತರಲಾಗಿದೆ. (ಕಾಮಗಾರಿಯು ಪ್ರಗತಿಯಲ್ಲಿದೆ). |

| | | |
|---|---|---|
| | | • ಈ ಯೋಜನೆಯಡಿಯಲ್ಲಿ 55 ಎಕ್ಸ್ಕಾವೇಟರ್ **(Excavator)** ಯಂತ್ರವನ್ನು ಬಳಸುವುದು. 26 ಜಲ ಸೋರಿಕೆಯಾಗದ ಲಾರಿಗಳು ಮತ್ತು 14 ಟ್ರ್ಯಾಕ್ಟರ್‌ಗಳು, 180 ಕೂಲಿ ಕಾರ್ಮಿಕರನ್ನು ಬಳಸಿ ಬಳಸಲು ಅವಕಾಶ ಮಾಡಲಾಗಿರುತ್ತದೆ. ಯೋಜನೆ ವ್ಯಾಪ್ತಿಯ 581.00 ಕಿ.ಮೀ ಉದ್ದದ ರಾಜಕಾಲುವೆಗಳಲ್ಲಿ ಪ್ರತಿಬಾರಿ ಆಗುವ ಮಳೆಯಿಂದ ತುಂಬುವ ಹೂಳನ್ನು ಆಗ್ಗಿಂದಾಗ್ಗೆ ಮುಕ್ತ ಮಾಡಿ ಮಳೆ ನೀರು ಸರಾಗವಾಗಿ ಹರಿಯುವಂತೆ ಮಾಡಲಾಗುತ್ತಿರುತ್ತದೆ.<br>• 2022–23ನೇ ಸಾಲಿನ ಸರ್ಕಾರದ ಅನುದಾನದ ಅಡಿಯಲ್ಲಿ ಕಾಲುವೆಯ ತಡೆಗೋಡೆಯ ಅಭಿವೃದ್ಧಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಲುವೆಯಲ್ಲಿ ಕಂಡುಬರುವ ಇಕ್ಕಟ್ಟಾದ ಸೇತುವೆಗಳು ಹಾಗೂ ಹೂಳನ್ನು ತಡೆಯಲು ಹೂಳು ತಡೆಗುಂಡಿಗಳನ್ನು, ಕಸಕಡ್ಡಿ ತಡೆಯಲು ಸ್ಕ್ರೀನನ್ನು **(Trash Barrier)** ಅಳವಡಿಸಲಾಗಿದೆ. ಕಾಲುವೆಯಲ್ಲಿ ಘನತ್ಯಾಜ್ಯ ಹಾಕುವುದನ್ನು ತಡೆಯಲು ತಂತಿಬೇಲಿಯನ್ನು **(chain link fencing)** ಅಳವಡಿಸಲಾಗಿದೆ.<br>4. <u>ದೀರ್ಘಾವಧಿ ಕ್ರಮಗಳು:</u><br>• ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕಾಲುವೆಗಳ ಮೇಲೆ ಸುಮಾರು 2949 ಒತ್ತುವರಿಯನ್ನು ಗುರುತಿಸಲಾಗಿದ್ದು, ಇದರಲ್ಲಿ 2178 ಒತ್ತುವರಿಗಳನ್ನು ತೆರವುಗೊಳಿಸಲಾಗಿದ್ದು, ಉಳಿಕೆ 771 ಒತ್ತುವರಿಗಳ ಸರ್ವೆ ಕಾರ್ಯ ಮತ್ತು ಒತ್ತುವರಿ ತೆರವು ಕಾರ್ಯಾಚರಣೆಯು ಏಕಕಾಲದಲ್ಲಿ ನಡೆಯುತ್ತಿರುತ್ತದೆ. |
| ಇ) | ಕಾಲುವೆಗಳಲ್ಲಿ ಸಂಗ್ರಹವಾಗಿರುವ, ಹೂಳು, ತ್ಯಾಜ್ಯ ನಿವಾರಣೆ ಮಾಡುವುದರ ಜೊತೆಗೆ ಈ ಹಿಂದೆ ಮಳೆ ಅನಾಹುತ ಸಂಭವಿಸಿರುವಂಥ ಸೂಕ್ಷ್ಮ ಪ್ರದೇಶಗಳಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ? | ಕಾಲುವೆಗಳಲ್ಲಿ ಸಂಗ್ರಹವಾಗಿರುವ, ಹೂಳು, ತ್ಯಾಜ್ಯ ನಿರ್ವಹಣೆ ಮಾಡಲು 28 ವಿಧಾನಸಭಾ ಕ್ಷೇತ್ರವಾರು 30 ಪ್ಯಾಕೇಜ್ ಕಾಮಗಾರಿಗಳನ್ನು 03 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. |

| | | |
|---|---|---|
| | | ಮುಂದುವರೆದು, ಕಾಲುವೆಗಳಲ್ಲಿ ಸಂಗ್ರಹವಾಗಿರುವ, ಹೂಳು, ತ್ಯಾಜ್ಯ ನಿವಾರಣೆ ಮಾಡುವುದರ ಜೊತೆಗೆ ಈ ಹಿಂದೆ ಮಳೆ ಅನಾಹುತ ಸಂಭವಿಸಿರುವ ಸೂಕ್ಷ್ಮ ಪ್ರದೇಶಗಳಲ್ಲಿ ಸರ್ಕಾರವು 2022-23ನೇ ಸಾಲಿನಲ್ಲಿ ಒದಗಿಸಲಾಗಿರುವ ಅನುದಾನದಲ್ಲಿ 94 ಪ್ಯಾಕೇಜ್ ಕಾಮಗಾರಿಗಳ ಅಡಿಯಲ್ಲಿ ಒಟ್ಟು 195 ಕಿ.ಮೀ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳಿಗೆ ತಡಗೋಡೆ ನಿರ್ಮಾಣ ಮತ್ತು ಪುನರ್ ನಿರ್ಮಾಣ, ಸೇತುವೆಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. |

**ಸಂಖ್ಯೆ: ನಅಇ 290 ಎಂಎನ್‌ವೈ 2023 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ